**ಓ.ಎಸ್. ನಂಃ 310/2015**

**ಡಿ.ಡಬ್ಲ್ಯೂಃ 1**

**ದಿನಾಂಕ 04.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಹೆಚ್.ಕೆ.ಹೆಚ್. ವಕೀಲರಿಂದಃ**

14. ನಿಡಿ.32 ರ ದಾಖಲೆಯನ್ನು ವಾದಿ ಮತ್ತು ನನ್ನ ತಂದೆಯಾದ 2 ನೇ ಪ್ರತಿವಾದಿಯು ನನಗೆ ಬರೆದುಕೊಟ್ಟಿರುತ್ತಾರೆ. ನಿಡಿ.32 ರ ದಾಖಲೆಗೆ ಗೋವಿಂದೇಗೌಡರು ಮತ್ತು ಮಂಟೇಗೌಡರು ಸಾಕ್ಷಿದಾರರಾಗಿ ತಮ್ಮ ಸಹಿಗಳನ್ನು ಹಾಕಿರುತ್ತಾರೆ. ನಿಡಿ.32 ರ ದಾಖಲೆಯನ್ನು ಪತ್ರ ಬರಹಗಾರರಾದ ರಾಮೇಗೌಡರ ಕಚೇರಿಯ ಮುಂದೆ ಬರೆದಿರುತ್ತಾರೆ.

15. ದಿನಾಂಕ 28.07.2005 ರಲಿ ನಿಡಿ.32 ರ ದಾಖಲೆಯನ್ನು ನನಗೆ ಬರೆದುಕೊಟ್ಟಿರುತ್ತಾರೆ. ನಿಡಿ.32 ರ ದಾಖಲೆಯ ಛಾಪಾ ಕಾಗದವನ್ನು ವಾದಿ ಮತ್ತು 2 ನೇ ಪ್ರತಿವಾದಿ ಖರೀದಿಸಿರುತ್ತಾರೆ. ನಿಡಿ.32 ರ ದಾಖಲೆಯ ಛಾಪಾ ಕಾಗದವನ್ನು ತರಲು ವಾದಿ ಮತ್ತು 2 ನೇ ಪ್ರತಿವಾದಿ ಜೊತೆಯಾಗಿ ಹೋಗಿದ್ದು, ಛಾಪಾ ಕಾಗದಕ್ಕೆ ಕೇವಲ ಒಬ್ಬರ ಹೆಸರು ಮಾತ್ರ ಸಾಕು ಎಂದು ಹೇಳಿದ ಕಾರಣ ನಿಡಿ.32 ರ ದಾಖಲೆಯ ಛಾಪಾ ಕಾಗದವನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ತೆಗೆದಿರುತ್ತಾರೆ. ವಾದಿಯು ನಿಡಿ.32 ರ ದಾಖಲೆಯ ಛಾಪಾ ಕಾಗದವನ್ನು ತಂದಿರುವುದಿಲ್ಲ ಹಾಗೂ ನಿಡಿ.32 ರ ದಾಖಲೆಯನ್ನು ನನಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ನಿಡಿ.32 ರ ಮೂಲ/ಅಸಲು ದಾಖಲೆಯು ನನ್ನ ಬಳಿ ಇದೆ. ನಿಡಿ.32 ರ ದಾಖಲೆಯನ್ನು ನಾನು ಮೋಸದಿಂದ ಸೃಷ್ಟಿಸಿರುವ ಕಾರಣ ನಿಡಿ.32 ರ ಮೂಲ/ಅಸಲು ಪ್ರತಿಯನ್ನು ನ್ಯಾಯಾಲಯಕ್ಕೆ ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.32 ರ ಮೂಲ/ಅಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಿಡಿ.32 ರ ದಾಖಲೆಯನ್ನು ವಾದಿ ಮತ್ತು 2 ನೇ ಪ್ರತಿವಾದಿಯು

ನನಗೆ ಬರೆದುಕೊಟ್ಟ ಕಾರಣ ನಿಡಿ.32 ರ ದಾಖಲೆಗೆ ನನ್ನ ಸಹಿಯ ಅಗತ್ಯವಿಲ್ಲ ಎಂದು ಪತ್ರ ಬರಹಗಾರರು ಹೇಳಿದ್ದರು. ನಿಡಿ.32 ರ ದಾಖಲೆಯಲ್ಲಿ 2 ನೇ ಪ್ರತಿವಾದಿಯು ತಮ್ಮ ಒಂದು ಸಹಿಯನ್ನು ಹಾಕಿರುತ್ತಾರೆ. ನಾನು ಅನಕ್ಷರಸ್ಥರಳಾಗಿರುವ ಕಾರಣ ನನ್ನ ತಂದೆಯ ಸಹಿಯನ್ನು ನಿಡಿ.32 ರ ದಾಖಲೆಯಲ್ಲಿ ಗುರುತಿಸಲು ಆಗುವುದಿಲ್ಲ.

17. ನಿಡಿ.32 ರ ದಾಖಲೆಗೆ ವಾದಿ, 2 ನೇ ಪ್ರತಿವಾದಿ, ಮಂಜೇಗೌಡರು, ಗೋವಿಂದೇಗೌಡ ಹಾಗೂ ರಾಮೇಗೌಡರು ತಮ್ಮ ಸಹಿಗಳನ್ನು ಹಾಕಿರುತ್ತಾರೆ. ನಿಡಿ.32 ರಲ್ಲಿ ವಾದಿಯ ಸಹಿಯನ್ನು ನಾನೇ ಸುಳ್ಳಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.32 ರಲ್ಲಿರುವ ಸಹಿ ವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಡಿ.32 ರ ದಾಖಲೆಯಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿದ್ದು, ಸದರಿ ತಿದ್ದುಪಡಿಯ ಬಳಿ ನಿಡಿ.32 ರ ದಾಖಲೆಯ ಪಕ್ಷಗಾರರ ಸಹಿಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

18. ನಿಡಿ.32 ರಲ್ಲಿ ಬರೆದಿರುವ ವಿಷಯಗಳನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ನಾನು ಮತ್ತು 2 ನೇ ಪ್ರತಿವಾದಿ ಶಾಮಿಲಾಗಿ ನಿಡಿ.32 ರ ದಾಖಲೆಯನ್ನು ಮೋಸದಿಂದ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ 'ಬಿ' ಅನುಸೂಚಿ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡುವಂತೆ ಕೋರಿ ವಾದಿ ಮತ್ತು 2 ನೇ ಪ್ರತಿವಾದಿ ನಿಡಿ.25 ರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಯು ನಿಡಿ.25 ರ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಬದಲಾಗಿ ಸದರಿ ದಾಖಲೆಯನ್ನು ನಾನೇ ಮೋಸದಿಂದ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬರೆಯಲು ಬರದ ಕಾರಣ ನಿಡಿ.25 ರ ಅರ್ಜಿಯನ್ನು ವಾದಿ ಮತ್ತು 2 ನೇ ಪ್ರತಿವಾದಿ ಬರೆದಿರುತ್ತಾರೆ. ನಿಡಿ.32 ರ ದಾಖಲೆಯ ಆಧಾರದ ಮೇಲೆ ದಾವಾ 'ಬಿ' ಅನುಸೂಚಿ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡುವಂತೆ ಕೋರಿ ವಾದಿ ಮತ್ತು 2 ನೇ ಪ್ರತಿವಾದಿ ನಿಡಿ.25 ರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ.

19. ನಿಡಿ.32 ರ ದಾಖಲೆಯನ್ನು ನಾನು ಮತ್ತು 2 ನೇ ಪ್ರತಿವಾದಿ ಸಾಕ್ಷಿದಾರರೊಂದಿಗೆ ಶಾಮಿಲಾಗಿ ಸುಳ್ಳಾಗಿ ಸೃಷ್ಟಿಸಿರುವ ದಾಖಲೆ ಆಗಿರುವ ಕಾರಣ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ 'ಬಿ' ಅನುಸೂಚಿ ಆಸ್ತಿಯನ್ನು ವಾದಿ ನನ್ನ ಹೆಸರಿಗೆ ಬರೆದುಕೊಟ್ಟಿದ್ದರೆ ಅವರು ನೊಂದಾಯಿತ ದಾಖಲೆ ಮೂಲಕ ನನಗೆ ಬರೆದುಕೊಡುತ್ತಿದ್ದರು ಹಾಗೂ ದಾವಾ 'ಬಿ'

ಅನುಸೂಚಿ ಆಸ್ತಿಯನ್ನು ವಾದಿ ನನ್ನ ಹೆಸರಿಗೆ ಬರೆದುಕೊಡದ ಕಾರಣ ನಾನು ಕಾನೂನು ಬಾಹಿರವಾಗಿ ನಿಡಿ.32 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸಾಕ್ಷಿಯು ನಿಡಿ.32 ರ ದಾಖಲೆಯನ್ನು ವಾದಿಯೇ ನನಗೆ ಬರೆದುಕೊಟ್ಟಿದ್ದು, ಅದನ್ನು ನೊಂದಣಿ ಮಾಡುವ ಅಗತ್ಯ ಇಲ್ಲ ಎಂದು ವಾದಿಯೇ ನನ್ನಲ್ಲಿ ಹೇಳಿರುತ್ತಾರೆ ಆದ್ದರಿಂದ ನಿಡಿ.32 ರ ದಾಖಲೆಯನ್ನು  ನೋಂದಣಿ ಮಾಡಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ.

20.  ದಾವಾ 'ಬಿ' ಅನುಸೂಚಿ ಆಸ್ತಿಯನ್ನು ಕೇವಲ 2 ನೇ ಪ್ರತಿವಾದಿ ಮಾತ್ರ ನನಗೆ ಬರೆದುಕೊಟ್ಟಿರುತ್ತಾರೆ ಎಂದು ನಿಡಿ.27 ರ ದಾಖಲೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ನಿಡಿ.25 ರಿಂದ 32 ರ ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.32 ರ ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**